CC 518/24

ಪಿಡಬ್ಲ್ಯೂಃ 1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ದಿಃ31-01-2025

ಮುಂದುವರಿದ ಪಾಟೀ ಸವಾಲು : ಆರೋಪಿ ಪರಃ ಶ್ರೀ ಹೆಚ್ ಆರ್ ಕೆ ವಕೀಲರಿಂದಃ

ಮೃತ ಜಯಂತ್ ರವನ್ನು 8.50 ಸಮಯದಲ್ಲಿ ಹೆಬ್ರಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು 10.00 ಗಂಟೆಯವರೆಗೂ ಆಸ್ಪತ್ರೆಯಲ್ಲಿ ಇದ್ದೆ. ಅಲ್ಲಿಂದ 10.30 ಗಂಟೆಗೆ ಠಾಣೆಗೆ ಹೋಗಿರುತ್ತೇನೆ. ಚಾಸಾ 2 ಮತ್ತು 3 ರವರೊಂದಿಗೆ ಠಾಣೆಗೆ ಹೋಗಿರುತ್ತೇನೆ. ರಾತ್ರಿ ಸುಮಾರು 2.00 ಗಂಟೆಯವರೆಗೂ ಠಾಣೆಯಲ್ಲಿ ಇದ್ದೇವು. ನಿಪಿ-1 ಅನ್ನು ಠಾಣೆಯಲ್ಲಿ ನಾನೇ ಬರೆದುಕೊಟ್ಟಿರುತ್ತೇನೆ. ನನ್ನ ಅನುಭವದ ಮೇರೆಗೆ ಬರೆದಿರುತ್ತೇನೆ. 15-20 ನಿಮಿಷದಲ್ಲಿ ಬರೆದಿರುತ್ತೇನೆ. ನನ್ನ,

ಚಾಸಾ 2 ಮತ್ತು 3 ರವರನ್ನು ವಿಚಾರಿಸಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಪೋಲಿಸರು ಮಹಜರಿಗೆ ಬರುವಾಗ ಚಾಸಾ 4 ಮತ್ತು 5 ರವರು ಹಾಜರಿದ್ದರು. ಚಾಸಾ 4 ಮತ್ತು 5 ನನ್ನ ಸ್ನೇಹಿತರು ಅವರು ಪೋಲಿಸರು ಬರುವಾಗ ಸ್ಥಳದಲ್ಲಿ ಇದ್ದರು. ಪೋಲಿಸರು ಸ್ಥಳಕ್ಕೆ ಬರುವಾಗ ನಿಪಿ-4 ರಂತೆ ಆರೋಪಿ ವಾಹನ ಅಪಘಾತ ಸ್ಥಳದಲ್ಲಿ ಇರಲಿಲ್ಲ ಅದನ್ನು ರಸ್ತೆಯ ಬದಿಗೆ ಹಾಕಲಾಗಿತ್ತು. ಮರುದಿನ ಅಪಘಾತ ಸ್ಥಳದಲ್ಲಿ ರಕ್ತದಕಲೆ ಇತ್ತು. ಸ್ಥಳದಲ್ಲಿ ಪೋಲಿಸರು ಮಹಜರುವ ಮಾಡಿ, ಭಾವಚಿತ್ರ ತೆಗೆದು ನನ್ನ, ಚಾಸಾ 4 ಮತ್ತು 5 ರವರ ಸಹಿ ಪಡೆದುಕೊಂಡಿರುತ್ತಾರೆ. ಅಪಘಾತ ರಸ್ತೆ 50 ಅಡಿ ಅಗಲ ಇದೆ. ಅಪಘಾತವಾದಾಗ ದಾರಿ ದೀಪ ಇರಲಿಲ್ಲ. ರಾಜ್ಯ ಹೆದ್ದಾರಿಯಾದ ಕಾರಣ ಅಲ್ಲಿ ದಾರಿ ದೀಪ ಇರಲಿಲ್ಲ. ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕೊಸ್ಕರ ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ಅತೀವೇಗ ಮತ್ತು ಅಜಾಗರೂಕತೆಯಿಂದ ಆರೋಪಿ ವಾಹನ ಚಾಲನೆ ಮಾಡಿರುವುದಿಲ್ಲ ಮತ್ತು ಡಿಕ್ಕಿ ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ಜಯಂತ್ ರವರು ಕುಡಿದು ಬಂದು ರಸ್ತೆಗೆ ಬಂದು ಅವರ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನಿಪಿ-3 ನಕ್ಷೆ ಸರಿ ಇದೆ. ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾರ್ವಜನಿಕರು ನಡೆದುಕೊಂಡು ಹೋಗುವ ಅವಕಾಶ ಇಲ್ಲ ಎಂದರೆ ಸರಿ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ